ಸಿಂಧನೂರ್ ತಾಲ್ಲೂಕಿನಲ್ಲಿ ಪ್ರವಾಹದಿಂದ ನಾಶವಾದ ಹಳ್ಳಿಗಳ ಸಂಖ್ಯೆ

476 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1992 ನವೆಂಬರ್ ತಿಂಗಳಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಪ್ರವಾಹದಿಂದಾಗಿ ನಾಶವಾಗಿರುವ ಹಳ್ಳಿಗಳ ಸಂಖ್ಯೆ ಎಷ್ಟು?*

ಆ) *ಇದರಲ್ಲಿ ಪುನರ್ವಸತಿಗೊಳಿಸಲು ತೀರ್ಮಾನಿಸಿದ ಹಳ್ಳಿಗಳು ಎಷ್ಟು?*

ಇ) *ಪುನರ್ವಸತಿಗೊಳಿಸಲು ತೀರ್ಮಾನಿಸಿದ ಹಳ್ಳಿಗಳ ನಿವಾಸಿಗಳಿಗೆ ಮನೆಗಳನ್ನು ಹಂಚಲಾಗಿದೆಯೇ?*

ಈ) *ಹಂಚಲಾಗದಿದ್ದಲ್ಲಿ ಕಾರಣವೇನು?*

ಉ) *ಈ ದಿವಸದವರೆವಿಗೂ ಆ ಗ್ರಾಮಗಳ ಜನರಿಗೆ ಹಕ್ಕು ಪತ್ರಗಳನ್ನು ನೀಡದಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಊ) *ಹಕ್ಕುಪತ್ರ ಕೊಡಲು ಇನ್ನೂ ಬೇಕಾಗುವ ಅವಧಿ ಎಷ್ಟು?*

ಎ) *ಪುನರ್ವಸತಿ ಹಳ್ಳಿಗಳಿಗೆ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆಯೇ?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) 12 ಹಳ್ಳಿಗಳು ತೊಂದರೆಗೆ ಈಡಾಗಿವೆ.

ಆ) ಈ ಕೆಳಕಂಡ 6 (ಆರು) ಹಳ್ಳಿಗಳನ್ನು ಪುನರ್ವಸತಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

1) ಬಾದರ್ಲಿ
2) ಹರೇಟನೂರ
3) ಚಿತ್ರಾಲಿ
4) ಪುಲಮೇಶ್ವರದಿನ್ನಿ
5) ಹೆಡಗಿನಾಳ
6) ಹುಲುಗುಂಜಿ

ಇ) ಹರೇಟನೂರು, ಚಿತ್ರಾಲಿ ಮತ್ತು ಹೆಡಗಿನಾಳ ಗ್ರಾಮಗಳಲ್ಲಿ ಪುನರ್ವಸತಿಗಾಗಿ ಜಮೀನನ್ನು ಖರೀದಿಸಿ ನಿವೇಶನಗಳಾಗಿ ಮಾರ್ಪಡಿಸಿ ಸಂತ್ರಸ್ಥರಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ. ಬಾದರ್ಲಿ ಗ್ರಾಮದ ಜನರಿಗೆ ಹಕ್ಕುಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಈ) ಪುಲಮೇಶ್ವರದಿನ್ನಿಯಲ್ಲಿ ಭೂಮಿ ಖರೀದಿಸಿದ್ದು, ನ್ಯಾಯಾಲಯದಲ್ಲಿ ವ್ಯಾಜ್ಯವಿರುವುದರಿಂದ ಹಕ್ಕು ಪತ್ರಗಳನ್ನು ನೀಡಲಾಗಿಲ್ಲ. ಹಾಗೂ ಹುಲಗುಂಜಿ ಗ್ರಾಮದಲ್ಲಿ ಭೂಮಿ ಖರೀದಿಗಾಗಿ ಕ್ರಮ ಜರುಗಿದ್ದು, ಸಧ್ಯದಲ್ಲಿಯೇ ಹಕ್ಕುಪತ್ರಗಳನ್ನು ಹಂಚಲಾಗುವುದು.

ಉ) ಹೌದು.

ಊ) 3 ಗ್ರಾಮಗಳಲ್ಲಿ ಈಗಾಗಲೇ ಹಕ್ಕುಪತ್ರಗಳನ್ನು ನೀಡಲಾಗಿದ್ದು, ಉಳಿದ ಮೂರು ಗ್ರಾಮಗಳಿಗೆ ಹಕ್ಕುಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಎ) ಒದಗಿಸಲಾಗಿದೆ.

ಶಿಗ್ಗಾಂವ ತಾಲ್ಲೂಕು, ಶಹಾಬಜಾರ, ಅಂಕದಕಣ ಹಾಗೂ ಕೊಟ್ಟಗೇರಿ ರೆವೆನ್ಯೂ ಗ್ರಾಮಗಳನ್ನು ಸೇರಿಸಿ ಬಂಕಾಪುರ ಅಂತ ತಿದ್ದುಪಡಿ ಮಾಡುವ ಬಗ್ಗೆ.

1147- ಶ್ರೀ ಮಂಜುನಾಥ್ ಸಿ. ಕುನ್ನೂರ, (ಶಿಗ್ಗಾಂವ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಶಹಾಬಜಾರ, ಅಂಕದಕಣ, ಕೊಟ್ಟಿಗೇರಿ, ಗ್ರಾಮಗಳ ಜನಸಂಖ್ಯೆ ಎಷ್ಟು?

ಆ) ಸದರಿ ಗ್ರಾಮಗಳನ್ನು ಸೇರಿಸಿ ಬಂಕಾಪುರ ಗ್ರಾಮವೆಂದು ಮಾಡಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆಯೇ?

ಇ) ಈ ಬಗ್ಗೆ ಮಾನ್ಯ ಉಚ್ಚ-ನ್ಯಾಯಾಲಯದಿಂದ ಯಾವುದಾದರೂ ಆದೇಶ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದವರು ತೆಗೆದು ಕೊಂಡ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು)

ಅ)

1.	ಶಹಾಬಜಾರ ಗ್ರಾಮ	9,038
2.	ಅಂಕದಕಣ ಗ್ರಾಮ	3,953
3.	ಕೊಟ್ಟಿಗೇರಿ ಗ್ರಾಮ	2,038
	ಒಟ್ಟು	**15,029**

ಆ) ಹೌದು.

ಇ) ಇಲ್ಲ.

ಈ) ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕರೆದು ಪ್ರಾಥಮಿಕ ಅಧಿಸೂಚನೆಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಕೈಮಗ್ಗ ನೇಕಾರರ ಮತ್ತು ಬಾಲ ಕಾರ್ಮಿಕರ ಸಮಸ್ಯೆ

228 ಎ - ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗಧಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ? ನಿಗಧಿಪಡಿಸಲು ಸರ್ಕಾರ ಅನುಸರಿಸುತ್ತಿರುವ ಮಾನ-ದಂಡವೇನು?